SSLC Social Science practice question paper with key answer 2 2023-24

**ವಿಷಯ:– ಸಮಾಜ ವಿಜ್ಞಾನ**

**ಮಾಧ್ಯಮ: ಕನ್ನಡ**

**ಸಮಯ: 3 ಗಂಟೆ 15 ನಿಮಿಷಗಳು** **ಮಾದರಿ ಉತ್ತರಗಳು** **ಗರಿಷ್ಠ ಅಂಕಗಳು: 80**

---

**I. ಪ್ರತಿ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅದನ್ನು ಪೂರ್ಣಗೊಳಿಸಲು ಸರಿಯಾದ ಉತ್ತರವನ್ನು ಆರಿಸಿ ಅದರ ಕ್ರಮಾಕ್ಷರದೊಂದಿಗೆ ನಿಮ್ಮ ಉತ್ತರ ಪತ್ರಿಕೆಯಲ್ಲಿ ಬರೆಯಿರಿ. 8X1=8**

**1.** ವಿಶಾಲ ಮೈಸೂರು ರಾಜ್ಯ ಅಸ್ತಿತ್ವಕ್ಕೆ ಬಂದ ವರ್ಷ

ಎ. 1953 ಬಿ. 1956

ಸಿ. 1954 ಡಿ. 1955

ಉತ್ತರ:– **ಬಿ. 1956**

**2.** ಮೊದಲನೇ ಮಹಾಯುದ್ಧ ಅಂತ್ಯಗೊಳಿಸಿದ ಒಪ್ಪಂದ

ಎ. ಪ್ಯಾರಿಸ್ ಒಪ್ಪಂದ ಬಿ. ಪಾಂಡಿಚೇರಿ ಒಪ್ಪಂದ

ಸಿ. ಏಕ್ಸ್ ಲಾ ಚಾಪೇಲ್ ಒಪ್ಪಂದ ಡಿ ವರ್ಸೇಲ್ಸ್ ಒಪ್ಪಂದ

ಉತ್ತರ:– **ಡಿ. ವರ್ಸೇಲ್ಸ್ ಒಪ್ಪಂದ**

**3.** ಗ್ರಾಮೀಣ ಮಹಿಳೆಯರ ವಿಕಾಸಕ್ಕಾಗಿ ಕರ್ನಾಟಕ ಸರ್ಕಾರ ಜಾರಿಗೆ ತಂದ ಕಾರ್ಯಕ್ರಮ

ಎ. ಯುವನಿಧಿ ಬಿ. ಗೃಹಜ್ಯೋತಿ

ಸಿ. ಸ್ತ್ರೀಶಕ್ತಿ ಡಿ. ಅನ್ನಭಾಗ್ಯ

ಉತ್ತರ:– **ಸಿ. ಸ್ತ್ರೀಶಕ್ತಿ**

**4.** 'ಅಸ್ಪೃಶ್ಯತೆ ಹಿಂದೂ ಸಮಾಜಕ್ಕೆ ಹತ್ತಿದ ಕಳಂಕ' ಎಂದವರು

ಎ. ಪಂಪ ಬಿ ಡಾ. ಬಿ.ಆರ್.ಅಂಬೇಡ್ಕರ್

ಸಿ. ಮಹಾತ್ಮ ಗಾಂಧೀಜಿ ಡಿ. ಜ್ಯೋತಿಬಾ ಪುಲೆ

ಉತ್ತರ:– **ಸಿ. ಮಹಾತ್ಮ ಗಾಂಧೀಜಿ**

**5.** ಭಾರತದಲ್ಲಿ ಅತ್ಯಂತ ಎತ್ತರದ ಅಣೆಕಟ್ಟು (ಯೋಜನೆ)

ಎ. ಭಾಕ್ರಾ ನಂಗಲ್ ಯೋಜನೆ ಬಿ. ಹಿರಾಕುಡ್ ಯೋಜನೆ

ಸಿ. ಕೋಸಿ ಯೋಜನೆ ಡಿ. ದಾಮೋದರ್ ಯೋಜನೆ

ಉತ್ತರ:– **ಎ. ಭಾಕ್ರಾ ನಂಗಲ್ ಯೋಜನೆ**

**6.** ಭಾರತದ ಆರ್ಥಿಕ ಯೋಜನೆಯ ಪಿತಾಮಹ

ಎ. ಮಹಾತ್ಮ ಗಾಂಧೀಜಿ ಬಿ. ಡಾ.ಎಂ.ಎಸ್ ಸ್ವಾಮಿನಾಥನ್

ಸಿ. ಡಾ.ನಾರ್ಮನ್ ಬೋರ್ಲಾಗ್ ಡಿ. ಸರ್.ಎಂ.ವಿಶ್ವೇಶ್ವರಯ್ಯ

ಉತ್ತರ:– **ಡಿ. ಸರ್.ಎಂ.ವಿಶ್ವೇಶ್ವರಯ್ಯ**

**7.** ಗ್ರಾಮಾಂತರ ಪ್ರದೇಶಗಳಲ್ಲಿ ಕೈಗಾರಿಕೆಗಳ ಸ್ಥಾಪನೆ ಮತ್ತು ಅವುಗಳ ಆಡಳಿತ ಹಾಗೂ ಸಮಗ್ರತೆ ಕೇಂದ್ರೀಕರಿಸಲು ಸ್ಥಾಪಿಸಿರುವ ಸಂಸ್ಥೆ.

ಎ. ಕೈಗಾರಿಕಾ ಪ್ರದೇಶಗಳು ಬಿ. ಜಿಲ್ಲಾ ಕೈಗಾರಿಕಾ ಸಂಸ್ಥೆ

ಸಿ. ತಾಂತ್ರಿಕ ಸಂಸ್ಥೆ ಡಿ. ಕೈಗಾರಿಕಾ ಬ್ಯಾಂಕ್

ಉತ್ತರ:– **ಬಿ. ಜಿಲ್ಲಾ ಕೈಗಾರಿಕಾ ಸಂಸ್ಥೆ**

**8.** ಗ್ರಾಹಕ ಸಂರಕ್ಷಣೆ ಆಂದೋಲನ ಮೊದಲು ಪ್ರಾರಂಭಿಸಿದ ದೇಶ

ಎ. ಭಾರತ ಬಿ. ಅಮೇರಿಕಾ

ಸಿ. ರಷ್ಯಾ ಡಿ. ಜಪಾನ್

ಉತ್ತರ:– **ಬಿ. ಅಮೇರಿಕಾ**

**II. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ. 8X1=8**

**9.** ಸರ್ದಾರ್ ವಲ್ಲಭಭಾಯ್ ಪಾಟೇಲರನ್ನು "ಭಾರತದ ಉಕ್ಕಿನ ಮನುಷ್ಯ" ಎಂದು ಕರೆಯುತ್ತಾರೆ. ಏಕೆ?

ಉತ್ತರ:– **ಎಲ್ಲಾ ಸಂಸ್ಥಾನಗಳನ್ನು ಭಾರತದ ಒಕ್ಕೂಟಕ್ಕೆ ಸೇರಿದರು.**

**10.** ದೆಹಲಿಯ ತೀನ್ ಮೂರ್ತಿ ಭವನದ ಪ್ರಾಮುಖ್ಯತೆ ಏನು?

ಉತ್ತರ:– **1ನೇ ಮಹಾಯುದ್ಧದಲ್ಲಿ ಮೈಸೂರು, ಹೈದರಾಬಾದ್, ಜೋಧಪುರ ಸೈನಿಕರು ಬ್ರಿಟಿಷರ ಪರವಾಗಿ ಭಾಗವಹಿಸಿದವರ ಸ್ಮರಣಾರ್ಥ**

**11.** ಭಾರತ–ಚೀನಾ ದೇಶಗಳ ಸಂಬಂಧವು ಯಾವ ತತ್ವಗಳ ಮೇಲೆ ಅವಲಂಬಿತವಾಗಿದೆ?

ಉತ್ತರ:– **ಪಂಚಶೀಲ ತತ್ವಗಳ ಮೇಲೆ**

**12.** ಬಾಲಕಾರ್ಮಿಕತೆ ಎಂದರೇನು?

ಉತ್ತರ:– **14 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳು ಆರ್ಥಿಕ ಸಂಪಾದನೆಗಾಗಿ ದುಡಿಯುವುದು**

**13.** ಉಷ್ಣವಲಯದ ಎಲೆ ಉದುರಿಸುವ ಕಾಡುಗಳನ್ನು 'ಮಾನ್ಸೂನ್ ಕಾಡುಗಳು' ಎಂದು ಕರೆಯುವರು. ಏಕೆ?

ಉತ್ತರ:– **ಈ ಅರಣ್ಯದ ಮರಗಳು ಒಣಹವೆ ಋತುವಿನಲ್ಲಿ ತಮ್ಮ ಎಲೆಗಳನ್ನು ಉದುರಿಸತ್ತವೆ.**

**14.** ಕೋಶಿಯ ನೀತಿ ಎಂದರೇನು?

ಉತ್ತರ:– **ಸರ್ಕಾರವು ತನ್ನ ವರಮಾನ, ವೆಚ್ಚ ಮತ್ತು ಸಾಲಕ್ಕೆ ಸಂಬಂಧಿಸಿದಂತೆ ಕಾಲ ಕಾಲಕ್ಕೆ ಅನುಸರಿಸುವ ನೀತಿ.**

**15.** ನಿಗಧಿತ ಅವಧಿಗೆ ಮುಂಚೆ ಠೇವಣಿ ಹಣವನ್ನು ಹಿಂದಕ್ಕೆ ಪಡೆಯಲು ಸಾಧ್ಯವಾಗದ ಬ್ಯಾಂಕ್ ಖಾತೆ ಯಾವುದು?

ಉತ್ತರ:– **ನಿಶ್ಚಿತ ಠೇವಣಿ ಖಾತೆ**

**16.** ಉತ್ತರದ ಮೈದಾನವನ್ನು ಸಂಚಯನ ಮೈದಾನವೆಂದು ಕರೆಯುತ್ತಾರೆ. ಏಕೆ?

ಉತ್ತರ:– **ನದಿಗಳು ತಂದು ಹಾಕಿದ ಮೆಕ್ಕಲು ಮಣ್ಣಿನಿಂದ ನಿರ್ಮಿತವಾಗಿರುವುದಕ್ಕೆ**

**III. ಈ ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಎರಡು–ನಾಲ್ಕು ವಾಕ್ಯಗಳಲ್ಲಿ/ಅಂಶಗಳಲ್ಲಿ ಉತ್ತರಿಸಿ. 8X2=16**

**17.** ವೆಲ್ಲೆಸ್ಲಿಯು ಭಾರತೀಯ ಅರಸರನ್ನು ತಮ್ಮ ಹಿಡಿತಕ್ಕೆ ಹೇಗೆ ತಂದನು ವಿವರಿಸಿ.

ಉತ್ತರ:– **ಸಹಾಯಕ ಸೈನ್ಯ ಪದ್ಧತಿಯ ಷರತ್ತುಗಳು (ಯಾವುದಾದರೂ ನಾಲ್ಕು ಮಾತ್ರ)**

- ಬ್ರಿಟಿಷರ ಸೈನ್ಯದ ತುಕಡಿಯನ್ನು ಆಸ್ಥಾನದಲ್ಲಿರಿಸುವುದು.
- ಸೈನ್ಯದ ನಿರ್ವಹಣಾ ವೆಚ್ಚ ರಾಜ್ಯವೇ ಭರಿಸಬೇಕು
- ರಾಜನ ಆಸ್ಥಾನದಲ್ಲಿ ರೆಸಿಡೆಂಟ್ ನೇಮಕ
- ಯುರೋಪಿಯನ್ನರನ್ನು ನೇಮಿಸಿಕೊಳ್ಳುವಂತಿಲ್ಲ
- ದೇಶಿಯ ರಾಜರೊಂದಿಗೆ ಯುದ್ಧ/ಸಂಧಾನ ನಿಷೇಧ
- ಕಂಪನಿ ರಾಜ್ಯಕ್ಕೆ ಬಾಹ್ಯ & ಆಂತರಿಕ ರಕ್ಷಣೆ ನೀಡುವುದು

**18.** 1857ರ ದಂಗೆಯು ಆಡಳಿತ ಮತ್ತು ಭಾರತೀಯ ಸ್ವಾತಂತ್ರ್ಯ ಹೋರಾಟದಲ್ಲಿ ಕ್ರಾಂತಿಕಾರಕ ಬದಲಾವಣೆ ತಂದಿತು. ಸ್ಪಷ್ಟೀಕರಿಸಿ.

ಉತ್ತರ:- **1857ರ ದಂಗೆಯ ಪರಿಣಾಮಗಳು (ಯಾವುದಾದರೂ ನಾಲ್ಕು ಮಾತ್ರ)**

- ಈಸ್ಟ್ ಇಂಡಿಯಾ ಕಂಪನಿ ಆಡಳಿತ ಕೊನೆ.
- ಭಾರತದ ವ್ಯವಹಾರಗಳ ಕಾರ್ಯದರ್ಶಿಗೆ ಜವಾಬ್ದಾರಿ
- ಕಂಪನಿ ಒಪ್ಪಂದಗಳ ಅಂಗೀಕಾರ
- ವಿಸ್ತರಣಾ ನೀತಿಯ ಕೊನೆ
- ಸುಭದ್ರ ಸರ್ಕಾರದ ಆಶ್ವಾಸನೆ
- ಕಾನೂನಿನ ಮುಂದೆ ಎಲ್ಲಾರೂ ಸಮಾನರು
- ಧಾರ್ಮಿಕ ಹಸ್ತಕ್ಷೇಪ ಇಲ್ಲ
- ಭಾರತೀಯರ ಬೆಂಬಲಕ್ಕೆ ಒತ್ತು
- ಸ್ವಾತಂತ್ರ್ಯ ಹೋರಾಟಕ್ಕೆ ಹೊಸ ದಿಕ್ಸೂಚಿ

**19.** ಅನಕ್ಷರತೆಯನ್ನು ಹೋಗಲಾಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳಾವುವು?

ಉತ್ತರ:- **ಅನಕ್ಷರತೆಯನ್ನು ಹೋಗಲಾಡಿಸಲು ಸರ್ಕಾರ ಕೈಗೊಂಡ ಕ್ರಮಗಳು (ಯಾವುದಾದರೂ ನಾಲ್ಕು)**

- ಸರ್ವಶಿಕ್ಷಣ ಅಭಿಯಾನಕ್ಕೆ ಚಾಲನೆ
- ರಾಷ್ಟ್ರೀಯ ಸಾಕ್ಷರತಾ ಮಿಷನ್ ಆರಂಭ
- ವಿಕಲ ಚೇತನ ಶಿಕ್ಷಣ
- ಸಾಕ್ಷರ ಭಾರತ ಎಂಬ ಕಾರ್ಯಕ್ರಮ ಜಾರಿ
- 21ಎ ವಿಧಿಯನ್ವಯ ಶಿಕ್ಷಣ ಮೂಲಭೂತ ಹಕ್ಕು
- 2009ರಲ್ಲಿ ಶಿಕ್ಷಣಹಕ್ಕು ಕಾಯ್ದೆ ಜಾರಿ
- 6 ರಿಂದ 14 ವರ್ಷ ಉಚಿತ & ಕಡ್ಡಾಯ ಶಿಕ್ಷಣ
- ಮಹಿಳಾ ಶಿಕ್ಷಣಕ್ಕೆ ಒತ್ತು.

ಅಥವಾ

ದ್ವಿತೀಯ ಮಹಾಯುದ್ಧದ ಬಳಿಕ ಎದುರಾದ ಪ್ರಮುಖ ಸಮಸ್ಯೆಗಳು ಯಾವುವು?

- **ಮಾನವ ಹಕ್ಕುಗಳ ನಿರಾಕರಣೆ**
- **ಶಸ್ತ್ರಾಸ್ತ್ರಗಳ ಪೈಪೋಟಿ**
- **ಆರ್ಥಿಕ ಅಸಮಾನತೆ**
- **ವರ್ಣಭೇದ ನೀತಿ**
- **ಭಯೋತ್ಪಾದಕತೆ**

**20**. ಅಸ್ಪೃಶ್ಯತೆ ತೊಡೆದು ಹಾಕಲು ಇರುವ ಶಾಸನಾತ್ಮಕ ಹಾಗೂ ಸಂವಿಧಾನಾತ್ಮಕ ಕ್ರಮಗಳು ಯಾವುವು?

ಉತ್ತರ:- **ಅಸ್ಪೃಶ್ಯತೆ ತೊಡೆದು ಹಾಕಲು ಇರುವ ಕ್ರಮಗಳು:- (ಯಾವುದಾದರೂ ನಾಲ್ಕು)**

- **ತೊಲಗಿಸಲು ಸಮಾಜ ಸುಧಾರಕರ ಪ್ರಯತ್ನ**
- **17ನೇ ವಿಧಿ ಅಸೃಶ್ಯತೆಯನ್ನು ನಿಷೇಧಿಸಿದೆ.**
- **1955ರಲ್ಲಿ ಅಸೃಶ್ಯತಾ ಅಪರಾಧಗಳ ಕಾಯ್ದೆ ಜಾರಿ.**
- **1976ರ ನಾಗರಿಕ ಹಕ್ಕುಗಳ ಸಂರಕ್ಷಣಾ ಕಾಯ್ದೆ ಜಾರಿ.**
- **ಸಾರ್ವತ್ರಿಕ ಮತದಾನ ಹಕ್ಕು**
- **ಸಮಾನತೆಯ ಹಕ್ಕು ನೀಡಿಕೆ**
- **ಹಿಂದುಳಿದ ವರ್ಗಗಳಿಗೆ ಮೀಸಲಾತಿ ನೀಡಿಕೆ**
- **1989ರ ಅಸೃಶ್ಯತೆಯ ನಿರ್ಮೂಲನೆ ರಾಜ್ಯಗಳಿಗೆ ವಿಶೇಷ ಅಧಿಕಾರ**

ಅಥವಾ

ದೊಂಬಿಯು ಒಂದು ಸಮಾಜ ಘಾತುಕ ಚಟುವಟಿಕೆ. ಹೇಗೆ? (ಯಾವುದಾದರೂ ನಾಲ್ಕು)

- **ಎದುರಿಗೆ ಸಿಕ್ಕಿದ್ದಲ್ಲವನ್ನು ಹಾಳು ಮಾಡುವುದು**
- **ಗೊಂದಲ ಸೃಷ್ಠಿ ಮಾಡುವುದು**
- **ಅಪಾರ ಹಾನಿಯನ್ನುಂಟು ಮಾಡುವುದು**
- **ನಿಶ್ಚಿತ ಗುರಿ ಇರುವುದಿಲ್ಲ**
- **ಕಾನೂನು & ಸುವ್ಯವಸ್ಥೆಗೆ ಗಂಭೀರ ಸವಾಲು**
- **ದೊಂಬಿಗಳು ದೀರ್ಘಕಾಲ ನಡೆಯುವುದಿಲ್ಲ**

**21**. ಭಾರತದ ವ್ಯವಸಾಯವು 'ಮಾನ್ಸೂನ್ ಮಳೆಯೊಡನೆ ಆಡುವ ಜೂಜಾಟ'ವಾಗಿದೆ. ಸಮರ್ಥಿಸಿ.

ಉತ್ತರ:- **ಭಾರತದ ವ್ಯವಸಾಯವು 'ಮಾನ್ಸೂನ್ ಮಳೆಯೊಡನೆ ಆಡುವ ಜೂಜಾಟ**

- **ಭಾರತದ ವ್ಯವಸಾಯವು ಮಳೆಯನ್ನು ಅವಲಂಬಿಸಿದೆ**
- **ಮಾರುತಗಳು ದೇಶದ ವ್ಯವಸಾಯವನ್ನು ನಿಯಂತ್ರಿಸುತ್ತವೆ.**

- ಮಳೆ ವಿಫಲವಾದರೆ ಬರಗಾಲ ಬರುವುದು
- ಮಳೆ ಹೆಚ್ಚಾದರೆ ಪ್ರವಾಹ ಉಂಟಾಗಿ ಪ್ರಾಣ & ಆಸ್ತಿ ಹಾನಿ

**22.** ವಿವಿದೋದ್ದೇಶ ನದಿಕಣಿವೆ ಯೋಜನೆಯ ಪ್ರಮುಖ ಉದ್ದೇಶಗಳಾವುವು?

ಉತ್ತರ:- **ವಿವಿದೋದ್ದೇಶ ನದಿಕಣಿವೆ ಯೋಜನೆಯ ಉದ್ದೇಶಗಳು (ಯಾವುದಾದರೂ ನಾಲ್ಕು)**

- **ನೀರಾವರಿ ಸೌಲಭ್ಯ**
- **ಜಲವಿದ್ಯುಚ್ಛಕ್ತಿ ಉತ್ಪಾದನೆ**
- **ನದಿಗಳ ಪ್ರವಾಹ ನಿಯಂತ್ರಿಸುವುದು**
- **ನೌಕಾಯಾನದ ಸೌಲಭ್ಯ**
- **ಅರಣ್ಯ ಸಂಪತ್ತನ್ನು ವೃದ್ಧಿ**
- **ಮೀನುಗಾರಿಕೆ ಅಭಿವೃದ್ಧಿ**
- **ಮಣ್ಣಿನ ಸವಕಳಿ ನಿಯಂತ್ರಣ**
- **ಗೃಹ ಬಳಕೆ**

**23.** ವಿಕೇಂದ್ರೀಕರಣದ ಹಿನ್ನೆಲೆಯಲ್ಲಿ ಗಾಂಧೀಜಿಯವರ 'ಗ್ರಾಮ ಸ್ವರಾಜ್ಯ' ಕಲ್ಪನೆಯನ್ನು ವಿವರಿಸಿ.

ಉತ್ತರ:- **ವಿಕೇಂದ್ರೀಕರಣದ ಹಿನ್ನೆಲೆಯಲ್ಲಿ ಗಾಂಧೀಜಿಯವರ 'ಗ್ರಾಮ ಸ್ವರಾಜ್ಯ ಕಲ್ಪನೆ (ಯಾವುದಾದರೂ ನಾಲ್ಕು)**

- **ಗ್ರಾಮದ ಆಡಳಿತ ಗ್ರಾಮಸ್ಥರೇ ನೋಡಿಕೊಳ್ಳುವುದು.**
- **ಅಧಿಕಾರ ಹಂಚಿಕೆ**
- **ನಿರ್ಧಾರ ಕೈಗೊಳ್ಳುವಲ್ಲಿ ಜನರ ಪಾತ್ರ**
- **ತಳಮಟ್ಟದಿಂದ ಅಭಿವೃದ್ಧಿ**
- **ಅಭಿವೃದ್ಧಿ ಸಾಧನೆಯ ಪ್ರಕ್ರಿಯೆ**
- **ಶೋಷಣೆಗಳನ್ನು ತಡೆಯುತ್ತದೆ.**
- **ಸ್ವಾತಂತ್ರ್ಯ ಮತ್ತು ಘನತೆಯ ರಕ್ಷಣೆ**
- **ಸಹಾನುಭೂತಿ ಮತ್ತು ಸಹಕಾರ**
- **ಮಾನವೀಯತೆ ಮೌಲ್ಯಗಳ ವೃದ್ಧಿ**

**24.** ಗ್ರಾಹಕರು ಅನುಭವಿಸುತ್ತಿರುವ ಸಂಕಷ್ಟಗಳನ್ನು ತಿಳಿಸಿ?

ಉತ್ತರ:- **ಗ್ರಾಹಕರು ಅನುಭವಿಸುತ್ತೀರುವ ಸಂಕಷ್ಟಗಳು (ಯಾವುದಾದರೂ ನಾಲ್ಕು)**

- **ವ್ಯಾಪಾರಿ & ಪೂರೈಕೆದಾರಿಂದ ಶೋಷಣೆ**
- **ಮಧ್ಯವರ್ತಿಗಳ ಹಾವಳಿ ಹೆಚ್ಚಾಗುತ್ತಿದೆ.**
- **ಗ್ರಾಹಕರು ಮೋಸ ಹೋಗುತ್ತಾರೆ**

- **ಬೆಲೆಯನ್ನು ಮಧ್ಯವರ್ತಿ ನಿರ್ಧರಿಸುತ್ತಾರೆ**
- **ಗ್ರಾಹಕರು ಕಷ್ಟನಷ್ಟ & ಸಮಸ್ಯೆ ಎದುರಿಸುತ್ತಾರೆ**
- **ಕಳಪೆ ವಸ್ತುಗಳ ಹಾವಳಿ, ಕಲಬೆರಕೆ ಬಳಕೆ**
- **ತೂಕ & ಅಳತೆಯಲ್ಲಿ ಮೋಸ**

**IV. ಈ ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಮೂರರಿಂದ ಆರು ವಾಕ್ಯಗಳಲ್ಲಿ ಉತ್ತರಿಸಿ. 9X3=27**

**25.** ಮಾರ್ತಾಂಡವರ್ಮನು ತನ್ನ ರಾಜ್ಯವನ್ನು ಹೇಗೆ ಬಲಿಷ್ಠ ಹಾಗೂ ಪ್ರಾಬಲ್ಯಗೊಳಿಸಿದನೆಂದು ವಿವರಿಸಿ.

ಉತ್ತರ:– **ಮಾರ್ತಾಂಡವರ್ಮನ ಸಾಧನೆಗಳು: (ಯಾವುದಾದರೂ ಆರು ಮಾತ್ರ)**

- **1729–58ರ ಅವಧಿಯಲ್ಲಿ ಡಚ್ಚರಿಂದ ರಾಜ್ಯ ರಕ್ಷಿಸಿದ.**
- **ಇವನು ವೈನಾಡು ಸಂಸ್ಥಾನದ ಪ್ರಸಿದ್ಧ ರಾಜ.**
- **ಕರಿಮೆಣಸಿನ ಆಸೆಯಿಂದ ಬಂದ ವಿದೇಶಿ ಆಕ್ರಮಣ ತಡೆದ**
- **ಸುತ್ತಲಿನ ಸಂಸ್ಥಾನ & ಪರಕೀಯರಿಂದ ವೈನಾಡು ರಕ್ಷಣೆ**
- **ತಿರುವನಂತಪುರಕ್ಕೆ ರಾಜಧಾನಿ ವರ್ಗಾವಣೆ.**
- **ಇದು 'ವಿಶ್ವ ತಿರುವಾಂಕೂರು ಸಂಸ್ಥಾನ' ಎಂದು ಹೆಸರಾಯಿತು.**
- **ಗಡಿವಿಸ್ತರಿಸಲು 50ಲಕ್ಷ ಸೈನ್ಯ ಕಟ್ಟಿ ಮೆಣಸು ಪ್ರದೇಶ ವಶ**
- **ತಿರುವಾಂಕೂರಿನ ದಾಳಿಯಲ್ಲಿ ಡಚ್ಚರನ್ನು ಸೋಲಿಸಿದನು.**
- **"ನಾವೆಂದೂ ಮೆಣಸಿನ ವ್ಯಾಪಾರದ ಹಕ್ಕನ್ನು ಪರಕೀಯರಿಗೆ ಬಿಟ್ಟು ಕೊಡೆವು" ಎಂದು ಡಚ್ಚರಿಗೆ ಪತ್ರ ಬರೆದನು.**
- **ಡಚ್ಚರು 'ಕೊಳಚ್ಚಲ್' ಕದನದಲ್ಲಿ ಸೋತರು**
- **ಡಚ್ಚರಿಂದ ಬಂದರುಗಳನ್ನು ಮಾರ್ತಾಂಡವರ್ಮ ಪಡೆದನು.**

ಅಥವಾ

ಫ್ಯಾಸಿಸ್ಟ್‌ವಾದದ ಲಕ್ಷಣಗಳು ಯಾವುವು?

- ➢ **ಉಗ್ರ ರಾಷ್ಟ್ರೀಯವಾದ**
- ➢ **ಪರಕೀಯ ಶಕ್ತಿಗಳ ನಾಶ**
- ➢ **ಹಿಂಸೆಯ ವೈಭವೀಕರಣ**
- ➢ **ಜನಾಂಗೀಯ ಶ್ರೇಷ್ಠತೆ**
- ➢ **ಸಾಮ್ರಾಜ್ಯವಾದದ ವಿಸ್ತರಣೆ**
- ➢ **ನರಮೇಧಗಳಿಗೆ ಬೆಂಬಲ**

**26.** ಆಂಗ್ಲರ ವಿರುದ್ಧ ಕಿತ್ತೂರಿನಲ್ಲಾದ ದಂಗೆಯನ್ನು ವಿವರಿಸಿ.

ಉತ್ತರ:– **ಆಂಗ್ಲರ ವಿರುದ್ಧ ಕಿತ್ತೂರಿನಲ್ಲಾದ ದಂಗೆ:**

- ಮಲ್ಲಸರ್ಜನ ನಂತರ ಅಧಿಕಾರದಲ್ಲಿ ಆಸಕ್ತಿ ವಹಿಸಿದಳು
- ರುದ್ರಸರ್ಜನು ಮರಣದ ನಂತರ ಶಿವಲಿಂಗಪ್ಪನನ್ನು ದತ್ತು.
- ಕಿತ್ತೂರಿನಲ್ಲಿ ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿ ಜಾರಿ
- ಕಿತ್ತೂರನ್ನು ಪಡೆಯಲು ಥ್ಯಾಕರೆ ಯತ್ನ
- ಚೆನ್ನಮ್ಮ ಯುದ್ಧದಲ್ಲಿ ಥ್ಯಾಕರೆಯನ್ನು ಕೊಂದಳು
- ಬ್ರಿಟಿಷ್ ಸೈನಿಕರನ್ನು ಸೆರೆಮನೆಗೆ ಹಾಕಲಾಯಿತು.
- ಡೀಕ್ ವಿರುದ್ದ ವೀರಾವೇಶದಿಂದ ಹೋರಾಡಿದಳು
- ಕೊನೆಗೆ ಬ್ರಿಟಿಷರಿಂದ ಸೆರೆಯಾದಳು
- ಬೈಲಹೊಂಗಲ ಜೈಲಿನಲ್ಲಿ ಮರಣ ಹೊಂದಳು.

**27.** ಭಾರತೀಯ ಸಂಸ್ಕೃತಿ ಮತ್ತು ರಾಜಕೀಯಕ್ಕೆ ಅನಿಬೆಸೆಂಟ್‌ರವರ ಕೊಡುಗೆ ಅವಿಸ್ಮರಣೀಯವಾದ್ದದು. ಸಮರ್ಥಿಸಿ.

ಉತ್ತರ:– **ಭಾರತೀಯ ಸಂಸ್ಕೃತಿ ಮತ್ತು ರಾಜಕೀಯಕ್ಕೆ ಅನಿಬೆಸೆಂಟ್‌ರವರ ಕೊಡುಗೆಗಳು:–**

- ಭಾರತೀಯ ಸಂಸ್ಕೃತಿ ಶ್ರೇಷ್ಠಯ ಪ್ರತಿಪಾಧನೆ
- ಥಿಯೋಸಾಫಿಕಲ್ ಸೋಸೈಟಿಯ ಅನುಯಾಯಿ
- ಭಗವದ್ಗೀತೆಯನ್ನು ಇಂಗ್ಲೀಷ್‌ಗೆ ಅನುವಾದಿಸಿದರು.
- ಎಲ್ಲಾ ವರ್ಗಗಳಿಗೆ ಶಿಕ್ಷಣ ಸಿಗಬೇಕೆಂಬ ಆಶಯ
- ಬನರಾಸ್‌ನಲ್ಲಿ ಸೆಂಟ್ರಲ್ ಹಿಂದೂ ಕಾಲೇಜು ಸ್ಥಾಪನೆ
- ಶ್ವೇತ ಸರಸ್ವತಿ ಎಂಬ ಬಿರುದು
- ಹೋಮ್ ರೂಲ್ ಚಳುವಳಿಗೆ ಚಾಲನೆ
- ನ್ಯೂಇಂಡಿಯಾ & ಕಾಮನ್‌ವೀಲ್ ಪತ್ರಿಕೆಗಳ ಆರಂಭ
- ರಾಷ್ಟ್ರೀಯ ಕಾಂಗ್ರೇಸ್‌ನ ಮೊದಲ ಮಹಿಳಾ ಅಧ್ಯಕ್ಷೆ

**28.** ಭಾರತವು ರಷ್ಯಾದೊಂದಿಗೆ ಸೌಹರ್ದಯುತ ಸಂಬಂಧವನ್ನು ಹೊಂದಿದೆ. ಹೇಗೆ?

ಉತ್ತರ:– ಭಾರತವು ರಷ್ಯಾದೊಂದಿಗೆ ಸೌಹರ್ದಯುತ ಸಂಬಂಧ:–

- ಭಾರತ ರಷ್ಯಾ ಉತ್ತಮ ಬಾಂಧವ್ಯ ಹೊಂದಿವೆ.
- ಭಾರತ ರಷ್ಯಾ ಒಪ್ಪಂದ ಉತ್ತಮ ಪ್ರಗತಿ
- ಚೀನಾ ದಾಳಿಯನ್ನು ರಷ್ಯಾ ಖಂಡಿಸಿತು.
- ಗೋವಾ ವಿಮೋಚನೆಯಲ್ಲಿ ರಷ್ಯಾ ಸಹಕಾರ

- ತಾಷ್ಕೆಂಟ್ ಒಪ್ಪಂದಕ್ಕೆ ರಷ್ಯಾ ಸಹರಿಸಿತು.
- 1971ರ 20ವರ್ಷಗಳ ಒಪ್ಪಂದಕ್ಕೆ ಸಹಿ
- ಭಿಲ್ಯಾ & ಭೋಕಾರೊ ಸ್ಥಾಪನೆಗೆ ಸಹಕಾರ
- ಕೈಗಾರಿಕೆ & ವಾಣಿಜ್ಯಕ್ಕೆ ರಷ್ಯಾ ನೆರವು
- ಭಾರತಕ್ಕೆ ಖಾಯಂ ಸದಸ್ಯತ್ವಕ್ಕೆ ಪ್ರತಿಪಾಧನೆ

**29**. ಸಂಘಟಿತ ವಲಯವು ಅಸಂಘಟಿತ ವಲಯಕ್ಕಿಂತ ಭಿನ್ನ ಹೇಗೆ. ಸಮರ್ಥಿಸಿ.

ಉತ್ತರ:– ಸಂಘಟಿತ ಮತ್ತು ಅಸಂಘಟಿತ ವಲಯಗಳ ವ್ಯತ್ಯಾಸಗಳು:–

| ಸಂಘಟಿತ ಕೆಲಸಗಾರರು | ಅಸಂಘಟಿತ ಕೆಲಸಗಾರರು |
|---|---|
| 1) ಕಾಯ್ದೆ ಕಾನೂನಿಗೆ ಒಳಪಟ್ಟಿರುತ್ತಾರೆ | 1) ಕಾಯ್ದೆ ಕಾನೂನಿಗೆ ಒಳಪಟ್ಟಿರುವುದಿಲ್ಲ |
| 2) ನಿಗದಿತ ವೇತನ, ಆರ್ಥಿಕ ಪ್ರತಿಫಲ | 2) ಆರ್ಥಿಕ ಪ್ರತಿಫಲಗಳಿರುವುದಿಲ್ಲ |
| 3) ಅಧಿಕಾರ ಏಣಿ–ಶ್ರೇಣಿ ವ್ಯವಸ್ಥೆ | 3) ಕಾರ್ಯಕ್ಷೇತ್ರ ವಿಶಾಲ |
| 4) ವೈದ್ಯಕೀಯ ಸೌಲಭ್ಯಗಳಿರುತ್ತವೆ | 4) ವೈದ್ಯಕೀಯ ಸೌಲಭ್ಯಗಳಿರುವುದಿಲ್ಲ |
| 5) ಶೈಕ್ಷಣಿಕ ಅರ್ಹತೆಗೆ ಅವಕಾಶ | 5) ಶೈಕ್ಷಣಿಕ ಅರ್ಹತೆ ಇರುವುದಿಲ್ಲ |
| 6) ಸರ್ಕಾರದ ನೊಂದಣಿ ಅಗತ್ಯ | 6) ನಿಗದಿತ ಸಮಯ ಇಲ್ಲ |
| 7) ನಿಗದಿತ ಸಮಯದಲ್ಲಿ ಮಾತ್ರ ಕೆಲಸ | 7) ರಜೆ ಸೌಲಭ್ಯವಿಲ್ಲ |
| 8) ಸರ್ಕಾರಿ ಸೇವೆ, ಸೈನ್ಯ, ಶಾಲಾ | 8) ಕೃಷಿ ಕಾರ್ಮಿಕರು & ಕೂಲಿಗಳು |

**30**. ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಪರ್ಯಾಯ ಪ್ರಸ್ಥಭೂಮಿಯ ಮಹತ್ವವನ್ನು ವಿವರಿಸಿ.

ಉತ್ತರ:– **ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಪರ್ಯಾಯ ಪ್ರಸ್ಥಭೂಮಿಯ ಮಹತ್ವ:–**

- ಭಾರತದ ಭೂಸ್ವರೂಪಗಳಲ್ಲಿ ಅತಿ ದೊಡ್ಡದು
- ಭೂ ಇತಿಹಾಸದ ಪ್ರಕಾರ ಅತಿ ಪುರಾತನವಾದದ್ದು.
- ಜೈವಿಕ ವೈವಿಧ್ಯತೆಯಿಂದ ಕೂಡಿದೆ.
- ಆರ್ಥಿಕವಾಗಿ ಹೆಚ್ಚು ಪ್ರಾಮುಖ್ಯತೆಯನ್ನು ಪಡೆದಿದೆ.
- ಅಪಾರ ಖನಿಜ ಸಂಪನ್ಮೂಲ ಹೊಂದಿದೆ.
- ನದಿಗಳಿಗೆ ಉಗಮಸ್ಥಾನವಾಗಿದೆ.
- ಕೃಷಿ & ಕೈಗಾರಿಕೆಗಳ ಅಭಿವೃದ್ಧಿಗೆ ಪೂರಕ
- ಜಲವಿದ್ಯುಚ್ಛಕ್ತಿ ಉತ್ಪಾದನೆಗೆ ಅನುಕೂಲ

**31**. ಭಾರತದಲ್ಲಿ ಕಂಡುಬರುವ ಮಣ್ಣಿನ ವಿಧಗಳನ್ನು ಪಟ್ಟಿಮಾಡಿ.

ಉತ್ತರ:– **ಮಣ್ಣಿನ ವಿಧಗಳು:–**

- ಮೆಕ್ಕಲು ಮಣ್ಣು

- ಕಪ್ಪು ಮಣ್ಣು
- ಕೆಂಪು ಮಣ್ಣು
- ಜಂಬಿಟ್ಟಿಗೆ ಮಣ್ಣು
- ಮರುಭೂಮಿ ಮಣ್ಣು
- ಪರ್ವತ ಮಣ್ಣು

ಅಥವಾ

ಇತ್ತೀಚಿನ ವರ್ಷಗಳಲ್ಲಿ ಅರಣ್ಯ ಪ್ರದೇಶಗಳು ನಾಶವಾಗುತ್ತೀರಲು ಕಾರಣಗಳೇನು?

- ವ್ಯವಾಯದ ವಿಸ್ತರಣೆ
- ಹೈನುಗಾರಿಕೆ
- ರಸ್ತೆ & ರೈಲುಮಾರ್ಗಗಳ ನಿರ್ಮಾಣ
- ನೀರಾವರಿ ಯೋಜನೆಗಳ ನಿರ್ಮಾಣ
- ಕೈಗಾರಿಕೀಕರಣ
- ನಗರೀಕರಣ
- ಅತಿಯಾಗಿ ಮೇಯಿಸುವಿಕೆ
- ಕಾಡ್ಗಿಚ್ಚು

**32.** ಪಂಚವಾರ್ಷಿಕ ಯೋಜನೆಗಳ ಸಾಧನೆಗಳನ್ನು ತಿಳಿಸಿ.

ಉತ್ತರ:– **ಪಂಚವಾರ್ಷಿಕ ಯೋಜನೆಯ ಸಾಧನೆಗಳು:–**

- ರಾಷ್ಟ್ರೀಯ ಆದಾಯ ಬೆಳವಣಿಗೆಯ
- ತಲಾದಾಯದ ಹೆಚ್ಚಳ
- ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ ಸ್ವಾಲಂಬನೆ
- ಉದ್ಯೋಗಾವಕಾಶಗಳು ಹೆಚ್ಚಿವೆ.
- ವಿಜ್ಞಾನ & ತಂತ್ರಜ್ಞಾನದ ಪ್ರಗತಿ
- ದೇಶದಲ್ಲಿ ರಫ್ತು ಪ್ರಮಾಣ ಹೆಚ್ಚಿದೆ.
- ನಿರೀಕ್ಷಿತ ಜೀವಿತಾವಧಿ ಹೆಚ್ಚ
- ಸಾಕ್ಷರತೆಯ ಮಟ್ಟ ಹೆಚ್ಚಾಗಿದೆ.
- ಶಿಶು & ತಾಯಂದಿರ ಮರಣದರ ಕಡಿಮೆ
- ಜನಸಂಖ್ಯಾ ಬೆಳವಣಿಗೆ ದರ ಕಡಿಮೆ.

33. ಅಂಚೆ ಕಛೇರಿಗಳು ಒದಗಿಸುವ ಸೇವೆಗಳಾವುವು?

ಉತ್ತರ:– **ಅಂಚೆ ಕಛೇರಿಗಳು ಒದಗಿಸುವ ಸೇವೆಗಳು:–**

- **ಅಂಚೆ ಉಳಿತಾಯ ಖಾತೆ ನಿರ್ವಹಣೆ**
- **ರಾಷ್ಟ್ರೀಯ ಉಳಿತಾಯ ಪತ್ರ ನೀಡಿಕೆ**
- **ಕಿಸಾನ್–ವಿಕಾಸ ಪತ್ರ ನೀಡಿಕೆ**
- **ತಿಂಗಳ ಠೇವಣಿಗಳನ್ನು ನಿರ್ವಹಿಸುವುದು**
- **ಅಂಚೆ ವಿಮೆ ಪಾಲಿಸಿ ಮಾಡಿಸುವುದು**
- **ನಿವೃತ್ತಿ ವೇತನ ನೀಡುವುದು**
- **ಹಣವನ್ನು ವರ್ಗಾಯಿಸುವುದು**

ಅಥವಾ

ಉದ್ಯಮಿಯ ಕಾರ್ಯಗಳು ಯಾವುವು?

ಉತ್ತರ:– **ಉದ್ಯಮಿಯ ಕಾರ್ಯಗಳು:–**

- **ವ್ಯಾಪಾರ ಚಟುವಟಿಕೆಗಳನ್ನು ಆರಂಭಿಸುವುದು**
- **ಉತ್ಪಾದನಾಂಗಗಳನ್ನು ಸಂಯೋಜಿಸುತ್ತಾನೆ**
- **ನಿರ್ಧಾರಗಳನ್ನು ಕೈಗೊಳ್ಳುವುದು.**
- **ಎಲ್ಲಾ ಅಂಶಗಳನ್ನು ಸಂಯೋಜಿಸುತ್ತಾನೆ**
- **ಹೊಸ ಹೊಸ ವಿಧಾನಗಳ ಅಳವಡಿಕೆ**
- **ಹಣಕಾಸಿನ ಆಯವ್ಯಯ ನಿರ್ವಹಣೆ**
- **ಕಷ್ಟನಷ್ಟ, ಅನಿಶ್ಚಿತೆಗಳನ್ನು ಎದುರಿಸುತ್ತಾನೆ.**
- **ಸೂಕ್ತ ಮಾರ್ಗದರ್ಶನ ನೀಡುವುದು**

**V. ಈ ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಎಂಟು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ.** **4X4=16**

34. ನೆಹರುರವರು ಪ್ರಧಾನಮಂತ್ರಿಯಾಗಿ ಮಾಡಿದ ಸಾಧನೆಗಳೇನು?

ಉತ್ತರ:– **ನೆಹರುರವರು ಪ್ರಧಾನಮಂತ್ರಿಯಾಗಿ ಮಾಡಿದ ಸಾಧನೆಗಳು:–**

- **ದೇಶೀಯ ಸಂಸ್ಥಾನಗಳ ವಿಲೀನಿಕರಣ**
- **ಭಾಷಾವಾರು ಪ್ರಾಂತ್ಯಗಳ ರಚನೆ**
- **ಮಿಶ್ರ ಆರ್ಥಿಕ ವ್ಯವಸ್ಥೆ ಜಾರಿ**
- **ಬೃಹತ್ ಕೈಗಾರಿಕೆಗಳ ಸ್ಥಾಪನೆ & ಅಭಿವೃದ್ಧಿ**

- **ಪಂಚವಾರ್ಷಿಕ ಯೋಜನೆಗಳ ಜಾರಿ**
- **ಭಾರತದ ವಿದೇಶಾಂಗ ನೀತಿಯ ಜಾರಿ**
- **ಅಲಿಪ್ತ ನೀತಿ ಜಾರಿ**
- **ಪಂಚಶೀಲ ತತ್ವಗಳ ಜಾರಿ**
- **ಶಾಂತಿ & ಸಹಬಾಳ್ವೆ ಮಂತ್ರ**

**35.** ಗಾಯಿಡಿನ್ ಲೂ ಬ್ರಿಟಿಷರ ವಿರುದ್ಧ ಹೇಗೆ ಹೋರಾಡಿದಳು ವಿವರಿಸಿ.

ಉತ್ತರ:- **ಗಾಯಿಡಿನ್ ಲೂ ಬ್ರಿಟಿಷರ ವಿರುದ್ಧ ಹೋರಾಟ:**

- **ಈಶಾನ್ಯ ಭಾರತದ ಮಹಿಳೆಯರನ್ನು ಸೇರಿಸಿ ಒಂದು ಸೈನ್ಯ ಕಟ್ಟಿದಳು**
- **ಜಾದೋನಾಂಗ್ ಜೊತೆ ಸೇರಿ ಬ್ರಿಟಿಷರ ವಿರುದ್ಧ ಹೋರಾಡಿದಳು**
- **ಹರಕ್ಕಾ ಎಂಬ ಸಂಸ್ಥೆ ಕಟ್ಟಿದಳು**
- **ಜಾದೋನಾಂಗ್ ಸತ್ತ ನಂತರ ಎರಡು ಸೈನ್ಯದ ನೇತೃತ್ವ ವಹಿಸಿದಳು**
- **ಶಿವಾಜಿಯ ಗೆರಿಲ್ಲಾ ರೀತಿಯಲ್ಲಿ ಹೋರಾಡಿದಳು**
- **ಎಂಟು ತಿಂಗಳಲ್ಲೆ ಬ್ರಿಟಿಷರು ತತ್ತಿರಿಸಿದರು**
- **ಸಾವಿರಾರು ಸ್ತ್ರೀ ಪುರುಷರು ಅವಳ ಸೈನ್ಯಕ್ಕೆ ಸೇರಿಕೊಂಡರು**
- **ಸ್ಥಳೀಯರ ಸಹಾಯದಿಂದ ಬಂಧಿತಳಾದಳು**

ಅಥವಾ

ಬ್ರಿಟಿಷ್ ಶಿಕ್ಷಣದ ಪ್ರಭಾವದಿಂದ ಉಂಟಾದ ಅಭಿರುಚಿ ಮತ್ತು ಆಲೋಚನೆಗಳು ಭಾರತದಲ್ಲಿ ಹೊಸ ತಲೆಮಾರು ಸೃಷ್ಟಿಗೆ ಹೇಗೆ ಕಾರಣವಾದವು?

- **ವೈಜ್ಞಾನಿಕ ಆಲೋಚನೆ,ರಾಷ್ಟ್ರೀಯವಾದಿ ದೃಷ್ಟಿಕೋನ ಬೆಳವಣಿಗೆ**
- **ಸ್ಥಳೀಯ ಭಾಷೆ & ಸಾಹಿತ್ಯಕ್ಕೆ ಪ್ರೋತ್ಸಾಹ**
- **ವೃತ್ತ ಪತ್ರಿಕೆಗಳ ಉಗಮ**
- **ಸಾಮಾಜಿಕ & ಧಾರ್ಮಿಕ ಚಳುವಳಿಗೆ ನಾಂದಿ**
- **ಸ್ವಾತಂತ್ರ್ಯ ಚಳುವಳಿಗೆ ಪ್ರೋತ್ಸಾಹ**
- **ಸಾಂಸ್ಕೃತಿಕ ಪರಂಪರೆ ಅರಿಯಲು ಸಾಧ್ಯ.**
- **ಪಾಶ್ಚಾತ್ಯ ಚಿಂತನೆಗಳು ಭಾರತೀಯ ವಿದ್ಯಾವಂತರಲ್ಲಿ ನಾವಿನ್ಯತೆ**
- **ಪ್ರಜಾಪ್ರಭುತ್ವ ಪರಿಕಲ್ಪನೆಯ ಪರಿಚಯ**

**36.** ವಿಶ್ವಸಂಸ್ಥೆಯ ಸಾಧನೆಗಳನ್ನು ತಿಳಿಸಿ.

ಉತ್ತರ:- ವಿಶ್ವಸಂಸ್ಥೆಯ ಸಾದನೆಗಳು:-

**ಶಾಂತಿಸ್ಥಾಪನಾ ಕಾರ್ಯಗಳು:-**

- **ರಾಜಕೀಯ ಸಂಘರ್ಷಗಳ ನಿವಾರಣೆ**

- ಖಾಯಂ ಸದಸ್ಯರ ಒಮ್ಮತ ಕೊರತೆ ಸಾಧನೆ ಮಿಶ್ರರೂಪ
- ಸುಯೇಜ್ ಕಾಲುವೆ ಬಿಕ್ಕಟ್ಟು ಶಮನ
- ಇರಾನ್ & ಕಾಶ್ಮೀರ ಸಂಘರ್ಷ ನಿವಾರಣೆ
- ಅರಬ್–ಇಸ್ರೇಲ್ ವಿವಾದ ಬಗೆಹರಿಸಿದೆ
- ಕೊರಿಯಾ, ಹಂಗೇರಿ ವಿವಾದ ಇತ್ಯರ್ಥ
- ಅಣ್ವಸ್ತ್ರ & ನಿಶ್ಯಸ್ತ್ರೀಕರಣಕ್ಕೂ ಪ್ರಯತ್ನ

**ಆರ್ಥಿಕ ಹಾಗೂ ಸಾಮಾಜಿಕ ಸಾಧನೆಗಳು:–**

- ಸಾಮಾಜಿಕ ಪ್ರಗತಿ,ಉತ್ತಮ ಜೀವನ ಮಟ್ಟಕ್ಕೆ ಯತ್ನ
- ಸುಂಕ & ವ್ಯಾಪಾರ ಸಾಮಾನ್ಯ ಒಪ್ಪಂದವಾಗಿದೆ.
- ವಿಶ್ವಬ್ಯಾಂಕ್, ಐ.ಎಂ.ಎಫ್‌ಗಳ ಸ್ಥಾಪನೆ
- ವಿಶ್ವಆರೋಗ್ಯ ಸಂಸ್ಥೆ, ಯುನೆಸ್ಕೋ, ಯುನಿಸೆಫ್ ಸ್ಥಾಪನೆ
- ಸಾರ್ವತ್ರಿಕ ಮಾನವ ಹಕ್ಕುಗಳ ಘೋಷಣೆ
- ವರ್ಣಭೇದ ನೀತಿ ನಿರ್ಮೂಲನೆ
- ಸಾಮ್ರಾಜ್ಯಶಾಹಿತ್ವ & ವಸಾಹತುಶಾಹಿತ್ವ ನಾಶ

**37.** ಭಾರತದ ಆರ್ಥಿಕತೆಯಲ್ಲಿ ವ್ಯವಸಾಯವು ಪ್ರಮುಖ ಪಾತ್ರವನ್ನು ವಹಿಸುತ್ತದೆ. ಸ್ಪಷ್ಟಿಕರಿಸಿ.
ಉತ್ತರ:– **ಭಾರತದ ಆರ್ಥಿಕತೆಯಲ್ಲಿ ವ್ಯವಸಾಯದ ಮಹತ್ವ:–**

- ಭಾರತೀಯರ ಮುಖ್ಯ ಉದ್ಯೋಗ
- ಮಾನವನ ಪ್ರಮುಖ & ಪ್ರಾಚೀನ ವೃತ್ತಿ.
- ಜನಸಂಖ್ಯೆಗೆ ಆಹಾರ ಧಾನ್ಯಗಳ ಪೂರೈಕೆ
- ಇದು ಜೀವನಾಧಾರ ಉದ್ಯೋಗ
- ಜನರಿಗೆ ಉದ್ಯೋಗಾವಕಾಶ ಒದಗಿಸುತ್ತದೆ.
- ಕೈಗಾರಿಕೆಗಳಿಗೆ ಕಚ್ಚಾವಸ್ತುಗಳನ್ನು ಪೂರೈಸುತ್ತದೆ.
- ತೃತೀಯ ಉದ್ಯೋಗಗಳನ್ನು ಪೋಷಿಸುತ್ತದೆ.
- ರಾಷ್ಟ್ರೀಯ ಆದಾಯದ ಮೂಲ

38. ಭಾರತದ ನಕ್ಷೆ ಬರೆದು ಅದರಲ್ಲಿ ಈ ಕೆಳಗಿನ ಸ್ಥಳಗಳನ್ನು ಗುರುತಿಸಿ. 4+1=5

ಎ) ಭಾರತದ ಆದರ್ಶ ಕಾಲಮಾನ ರೇಖೆ

ಬಿ) ಬೋಕಾರೋ

ಸಿ) ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣ

ಡಿ) ದಿಗ್ಬಾಯ್

